ಅಜ್ಜನಂತೆ ನಡೆಯಲು ಅಭ್ಯಾಸವಷ್ಟೇ ಸಾಲದು, ಮಾನಸಿಕ ಸಮಾಧಾನ ಬೇಕು ಅಂದಿದ್ದಳು ಅಮ್ಮ... .ಒಂದು ಸಂಜೆ ಹೇನು ಹೆಕ್ಕಿಸಿಕೊಳ್ಳುವಾಗ... ಮಾತಿಗೆ ಸರಿಯಾಗಿ ಅಜ್ಜ ಕಾಣಿಸಿ, ಮರೆಯಾಗಿದ್ದ. 'ಉದಯ ಅಸ್ತಂಗತ...' ಅನ್ನುವ ಶಬ್ದ ಅನಾಯಾಸ ಅಜ್ಜನ ಕಂಡದ್ದೇ ಹೊರಬೀಳುತ್ತಿತ್ತು. ಅವಳಮ್ಮ 'ಶ್ಶಿ... ಹಾಂಗ್ ಹೇಳೂಕ್ ಆಗ್ದೇ ಮಗಾ' ಅಂದಿದ್ದಳು. ಏಕೆಂದು ಇಂದಿಗೂ ಹೇಳಿರಲಿಲ್ಲ. ಸಮಯದ ಕುರಿತ ಗಂಭೀರವೆನಿಸಿಕೊಂಡ, ಅಮ್ಮನಿಗೆ ಹುಚ್ಚು ಅನ್ನಿಸಿದ ಅಧ್ಯಯನ ಶುರುವಾದದ್ದೇ ಅಪರೂಪದ ತನ್ನ ಹಠದಿಂದ ಎಂದು ಆಕೆಗೆ ಮನವರಿಕೆಯಾಗಿತ್ತು. ಜಾತ್ರೆಯಲ್ಲಿ ಎಂದೂ ಏನನ್ನೂ ಹಠಮಾಡಿ ಕೇಳದವಳು, ಅಂದು ಅಟ್ಯೋಮ್ಯಾಟಿಕ್ ಸಮಯ ತೋರಿಸುವ, ಮುಳ್ಳಿನಿಂದಲ್ಲದೇ ಸಂಖ್ಯೆಗಳಲ್ಲೂ ಸಮಯ ಹೊರಳಿಕೊಳ್ಳುವ ಅದ್ಭುತ ಆವಿಷ್ಕಾರಕ್ಕೆ ಅವಳು ಬೆರಗಾಗಿ ಹೋಗಿದ್ದಳು. ಮುಳ್ಳು ತಿರುಗಿದರೆ ಮಾತ್ರ ಸಮಯ ದಾಟಿಕೊಳ್ಳುತ್ತದೆ. ಏಕೆಂದರೆ ಭೂಮಿ ತಿರುಗಿದರೆ ಮಾತ್ರ ಹಗಲು ಹೋಗಿ ರಾತ್ರಿಯಾಗುತ್ತದಲ್ಲ. ಆದರೆ, ಇಲ್ಲಿ ಈ ಸಣ್ಣ ಉಗುರಿನಗಲದ ಪರದೆಯಲ್ಲಿ ಅಂಕಿಗಳು ಮಿಣುಕಿ ಮಿಣುಕಿ ಸಮಯವನ್ನು ದಾಟಿಸುತ್ತವೆ. ಎಲ್ಲ ಸೋಜಿಗ. ವಿಚಿತ್ರ ಪುಳಕ... ಎಂದುಕೊಂಡು ಹೊಸ ಸಮಯಾಧಾರಿತ ಲೋಕಕ್ಕೆ ಸೇರಿಹೋದಳು.

ಆ ಪ್ರಾರಂಭದ ಸಮಯ ಸಂದರ್ಭದ ಕುತೂಹಲಕ್ಕೆ ಸಿಕ್ಕವನೇ ಈ ಭಟ್ಟರ ಅಜ್ಜ... ಒಮ್ಮೆ ವಾಚು ಹಿಡಿದು ಸೆಕೆಂಡುಗಳಷ್ಟೆ ಕಾಣುವಂತೆ ಸೆಟ್ ಮಾಡಿಟ್ಟುಕೊಂಡು ಯಾವುದಾದರೂ ನಾಯಿ ತನ್ನ ಮನೆಯ ತನ್ನ ಕಣ್ಣಳತೆಯ ಎಡತುದಿಯಿಂದ ಬಲತುದಿಗೆ ಹೋದರೆ ಅದು ಚಲಿಸುವ ಸಮಯವನ್ನು ಲೆಕ್ಕ ಹಾಕುವ ಎಂದು ಕಾದು ಕೂತವಳಿಗೆ ಕಂಡದ್ದು ಈ ಬಿಳಿ ತಲೆ ಬಿಳಿದೊಗಲಿನ ತೆಳುಮೈಯ ಅಜ್ಜ... 'ಇಪ್ಪತ್ತೆರಡು...' ಅಂದಿದ್ದಳು ಅಜ್ಜ ದಾಟಿಕೊಂಡ ನಂತರ. ಅಮ್ಮ ಒಳಗಿನಿಂದ 'ಎಂತದ್ದೇ' ಎಂದು ಕ್ಷೀಣದನಿಯಲ್ಲಿ ಕೇಳಿ ಸುಮ್ಮನಾದಳು. ಮತ್ತೊಂದು ದಿನ ಇಪ್ಪತ್ತೂರು ಅಂದುಕೊಂಡಳು ಮನಸ್ಸಿನಲ್ಲೇ.

ಅಲ್ಲಿಗೆ ಹುಚ್ಚು ಶುರುವಾಯಿತು. ಸಮಯ ಎಷ್ಟಾಗಿದೆ ಎನ್ನುವುದಕ್ಕಿಂತ ಎಷ್ಟು ಸೆಕೆಂಡಿನಲ್ಲಿ ಯಾವ ಕೆಲಸಗಳು ನಡೆಯುತ್ತವೆ ಅನ್ನುವುದು ಮುಖ್ಯವಾಯಿತು. ಶಾಲೆಯ ನೀರಿನ ತೊಟ್ಟಿಯಿಂದ ನೀರು, ದಾರಕಟ್ಟಿ ಬಿಟ್ಟಿರುವ ಪ್ಲಾಸ್ಟಿಕ್‌ನ ಲೋಟ ತುಂಬುವುದಕ್ಕೆ ಎಂಟರಿಂದ ಒಂಬತ್ತು ಸೆಕೆಂಡು ತೆಗೆದುಕೊಳ್ಳುತ್ತದೆ, ವಿನಾಯಕ ಶಾಲೆಯ ಬೆಲ್ಲನ್ನು ಐದುಆರು ಸೆಕೆಂಡು ಬಾರಿಸುತ್ತಾನೆ, ಹೆಡ್ ಮೇಷ್ಟ್ರು ಆಕಳಿಸಲು ಬಾಯಿ ತೆರೆದು ಮುಚ್ಚುವುದು ನಾಲ್ಕು ಐದು ಸೆಕೆಂಡುಗಳಷ್ಟು ಸಮಯದಲ್ಲಿ... ಹೀಗೆ... ನಿತ್ಯ ಅವಳ ಎಳೆಗಣ್ಣ ಅಡ್ಡಳತೆಯಲ್ಲಿ ಪೂರ್ವದಿಕ್ಕಿನಿಂದ ಅಜ್ಜ ಅಡ್ಡಹಾಯುತ್ತಿದ್ದ. ಇವಳು ಕೂತ ಸಗಣಿಸಾರಿಸಿ ಬಳಿದ ಮಣ್ಣಿನ ಚಿಟ್ಟೆಯಿಂದ ಅಜ್ಜ ಇವಳ ಕಾಲಹೆಜ್ಜೆ ಲೆಕ್ಕದಲ್ಲಿ ನಲವತ್ತೆಂಟು ಹೆಜ್ಜೆಗಳಷ್ಟು ದೂರದ ಬೇಲಿಸಾಲು ಹಿಡಿದು, ತುಸುಬಾಗಿ, ಚಕಚಕನೆ ನಡೆದುಹೋಗುತ್ತಿದ್ದ. ಬೆಳ್ಳಂಬೆಳಗ್ಗೆ ಅಪ್ಪ ಏಳೆಂಟು ನೀರುದೋಸೆಗಳನ್ನು ತಿಂದು, ತನ್ನ ಹಳೆಯ ಅರ್ಧಕ್ಕೆ ಅಂಗಿಯ ಮೇಲೊಂದು ಉದ್ದಕ್ಕೆ ಅಂಗಿ ಹಾಕಿಕೊಂಡು, ಸೊಂಟದ ಸುತ್ತಿನ ಕತ್ತಿಕೊಕ್ಕೆಗೆ ಕತ್ತಿ ಸಿಕ್ಕಿಸಿಕೊಂಡು, 'ಸಾಲಿಗೆ ಹೋಗ್ವತ್ಗೆ ಸಾವ್‌ಕಾಶ್' ಎಂದು ಹೇಳಿ ಹೋದ ಮರುಕ್ಷಣ ಒಲೆಯ ಮೇಲಿನ ದೋಸೆ ಹೆಂಚನ್ನು ಅಮ್ಮ ಉಜ್ಜುವ ಕಲ್ಲಿಗೊರಗಿಸಿದ ಸದ್ದು, ನಂತರ ಮಂಡಿಗೆ ಕೈಕೊಟ್ಟು ನಿಶ್ವಾಸ ಬಿಡುತ್ತ ಹೇಳುವ ಸದ್ದು ನಿರಂತರ ನಡೆಯುತ್ತಲೇ ಬಂದು, ದೈನಿಕವೊಂದರ ರೀತಿ ಅವಳ ತಲೆಯಲ್ಲಿ ಮೂಡಿಬಿಟ್ಟಿತ್ತು.

ಹೀಗೆ ಬಿಸಿಲಿನ್ನೂ ಸ್ಪಷ್ಟವಾಗಿ ಬಿದ್ದು ಅಂಗಳದಲ್ಲಿನ ತುಳಸಿಗಿಡದ ಎಲೆಗಳು ಸ್ಪಷ್ಟವಾಗಿ ಹೊಳೆಯುವುದಕ್ಕಿಂತ ಮುಂಚೆ ಹೊರಟುಬಿಡುವ ಅಪ್ಪ, ಸಂಜೆಗತ್ತಲಿಗೆ ಬಂದು, ಮತ್ತು ಮನೆ ಹಿಂದಿನ ಸ್ವಲ್ಪ ಜಾಗದಲ್ಲಿ ಸೌದೆ ಕಡಿದು ಒಟ್ಟುಮಾಡುವುದು, ಅದೂ ಇದೂ ಮಾಡುತ್ತಾ ಮಾತಿಗೆ ಸಿಕ್ಕುತ್ತಿದ್ದುದೇ ರಾತ್ರಿ ಮಲಗುವಾಗ. ಅಪ್ಪನ ಮೇಲೊಂದು ಕಾಲು ಹಾಕಿ ಅವನೊಟ್ಟಿಗೆ ಮಲಗಿ ನಿತ್ಯ ಒಂದಿಲ್ಲೊಂದು ಒಗಟು ಕೇಳುತ್ತ ಮಲಗತೊಡಗಿ ಎರಡು ಮೂರು ವರ್ಷಗಳು ದಾಟಿದ್ದವು. ಅಮ್ಮನ ಬಿಡದೆ ಅಂಟಿಕೊಂಡಿರುತ್ತಿದ್ದವಳು ಈಗ ಸಂಪೂರ್ಣ ಬಿಟ್ಟುಬಿಟ್ಟಿದ್ದಳು.

ಅಮ್ಮ ನಿಲ್ಲದೇ ಕೆಮ್ಮಲು ಶುರುಮಾಡಿದ ಒಂದು